# ಶಬ್ದಮಾಲಿನ್ಯ (ಕ್ರಮಬದ್ಧಗೊಳಿಸುವ ಮತ್ತು ನಿಯಂತ್ರಿಸುವ) ನಿಯಮಗಳು, 2000
## ಪರಿಸರ ಮತ್ತು ಅರಣ್ಯ ಮಂತ್ರಾಲಯ

### ಅಧಿಸೂಚನೆ

ಎಸ್. ಓ. 123 (ಇ) : ವಿವಿಧ ಮೂಲಗಳಾದ – ಔದ್ಯೋಗಿಕ ಚಟುವಟಿಕೆಗಳು, ಸಿಡಿಮದ್ದು ಸಿಡಿಸುವದು, ಕಟ್ಟಡ ನಿರ್ಮಾಣ ಕಾರ್ಯಕಲಾಪಗಳು, ಜನರೇಟರ್ ಸೆಟ್‌ಗಳು, ಧ್ವನಿವರ್ಧಕಗಳು, ಸಾರ್ವಜನಿಕ ಸಭೆಯ ವಿದ್ಯುನ್ಮಾನ ಉಪಕರಣಗಳು, ಸಂಗೀತ ವ್ಯವಸ್ಥೆಗಳು, ವಾಹನಗಳ ಹಾರ್ನ್‌ಗಳು ಮತ್ತು ಇತರ ಯಾಂತ್ರಿಕ ಉಪಕರಣಗಳಿಂದ ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚುತ್ತಿರುವ ಶಬ್ದ ಮಟ್ಟದಿಂದ ಮಾನವ ಆರೋಗ್ಯ ಮತ್ತು ಮಾನಸಿಕ ಸ್ವಾಸ್ಥ್ಯದ ಮೇಲೆ ವ್ಯತಿರಿಕ್ತ ಪರಿಣಾಮವಾಗುತ್ತಿರುವದು ಕಂಡುಬರುತ್ತಿರುವದರಿಂದ ಧ್ವನಿ ಮಾಲಿನ್ಯಕ್ಕೆ ಕಾರಣವಾಗುವ ಮತ್ತು ಉತ್ಪನ್ನವಾಗುವ ಮೂಲಗಳನ್ನು ಗುರುತಿಸಿ ನಿಯಂತ್ರಿಸಿ ಧ್ವನಿಗೆ ಸಂಬಂದಿಸಿದಂತೆ ಉತ್ತಮ ವಾಯು ಪರಿಸರದ ಸುವ್ಯವಸ್ಥೆ ಕಾಪಾಡುವ ಅವಶ್ಯಕತೆ ಕಂಡುಬಂದಿದೆ.

ಇದರಿಂದಾಗಿ ಧ್ವನಿ ಮಾಲಿನ್ಯ (ಕ್ರಮಬದ್ಧಗೊಳಿಸುವ ಮತ್ತು ನಿಯಂತ್ರಿಸುವ) ನಿಯಮ 1999ರ ಕರಡು ಅಧಿಸೂಚನೆಯನ್ನು ಕೇಂದ್ರ ಸರಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಸಂ. ಎಸ್. ಓ. 528 (1) ದಿನಾಂಕ 28 ಜೂನ್ 1999 ರಂದು ಹೊರಡಿಸಿ 60 ದಿನಗಳೊಳಗಾಗಿ ಸಾರ್ವಜನಿಕರಿಂದ ತಕರಾರು ಮತ್ತು ಸಲಹೆ ಕೇಳಿ ಗೆಜೆಟ್‌ನಲ್ಲಿ ಪ್ರಕಟಿಸಿ ಸಾರ್ವಜನಿಕರಿಗೆ ಪ್ರತಿ ಲಭ್ಯಗೊಳಿಸಲಾಯಿತು.

ಮತ್ತು ಈ ಅಧಿಸೂಚನೆಯ ಪ್ರತಿಗಳನ್ನು ಸಾರ್ವಜನಿಕರಿಗೆ 1 ಜುಲೈ 1999ರಿಂದ ನೀಡಲಾಯಿತು.

ಮತ್ತು ಸಾರ್ವಜನಿಕರಿಂದ ಈ ಕರಡು ಅಧಿಸೂಚನೆಗೆ ಬಂದ ಸಲಹೆ ಸೂಚನೆಗಳನ್ನು ಕೇಂದ್ರ ಸರಕಾರವು ಪರಿಗಣನೆಗೆ ತೆಗೆದುಕೊಂಡಿದೆ.

ಆದ್ದರಿಂದ ಈಗ ಪರಿಸರ (ರಕ್ಷಣೆ) ನಿಯಮಗಳು, 1986 ಇದರೊಂದಿಗೆ ಓದಲಾಗುವ ಪರಿಸರ (ಸಂರಕ್ಷಣೆ) ಅಧಿನಿಯಮ, 1986 (1986 ರ 29) ಇದರ ಕಲಮು 3 ರಉಪಕಲಮು (2) ರ ಖಂಡ (ii), ಕಲಮು 6 ರ ಉಪಕಲಮು (2) ರ ಖಂಡ(ಬಿ), ಮತ್ತು ಕಲಮು 25 ಇವುಗಳಿಂದ ನೀಡಲಾಗಿರುವ ಅಧಿಕಾರವನ್ನು ಚಲಾಯಿಸುತ್ತ ಕೇದ್ರ ಸರಕಾರವು ಶಬ್ದವು ಉತ್ಪಾದಿಸುವ ಮತ್ತು ನಿರ್ಮಿಸುವ ಮೂಲಗಳನ್ನು ಕ್ರಮಬದ್ಧಗೊಳಿಸಲು ಮತ್ತು ನಿಯಂತ್ರಿಸಲು ಈ ಕೆಳಗಿನ ನಿಯಮಗಳನ್ನು ಮಾಡುತ್ತದೆ.

**ಶಬ್ದಮಾಲಿನ್ಯ (ಕ್ರಮಬದ್ಧಗೊಳಿಸುವ ಮತ್ತು ನಿಯಂತ್ರಿಸುವ) ನಿಯಮಗಳು, 2000**

1. **ಸಂಕ್ಷಿಪ್ತ ಶೀರ್ಷಿಕೆ ಮತ್ತುಆರಂಭ**

(1) ಈ ನಿಯಮಗಳನ್ನು 'ಶಬ್ದಮಾಲಿನ್ಯ (ಕ್ರಮಬದ್ಧಗೊಳಿಸುವ ಮತ್ತು ನಿಯಂತ್ರಣ) ನಿಯಮಗಳು, 2000 ಎಂದು ಕರೆಯಬಹುದು

(2) ಅವುಗಳನ್ನು ಅಫೀಸಿಯಲ್ ಗಝೇಟಿನಲ್ಲಿ ಪ್ರಕಟಿಸಿದ ದಿನಾಂಕದಂದು ಜಾರಿಗೆ ಬರತತಕ್ಕದ್ದು.

2. **ಪರಿಭಾಷೆಗಳು**

ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಪೇಕ್ಷಿಸಿದ ಹೊರತು

(ಎ) **"ಅಧಿನಿಯಮ"** ಎಂದರೆ ಪರಿಸರ (ರಕ್ಷಣೆ) ಅಧಿನಿಯಮ, 1986 (1986 ರ 29)

(ಬಿ) **"ಪ್ರದೇಶ ಅಥವಾ ವಲಯ"** ಎಂದರೆ ಈ ನಿಯಮಗಳಿಗೆ ಹಚ್ಚಲಾಗಿರುವ ಅನುಸೂಚಿಯೊಳಗೆ ನೀಡಲಾಗಿರುವ ಎಲ್ಲ ಪ್ರದೇಶಗಳು.

(ಸಿ) **“ಪ್ರಾಧಿಕಾರ”** ಎಂದರೆ ಈ ಕೆಳಗಿನವರಾಗಿರುವ ಮತ್ತು ಅವರನ್ನು ಒಳಗೊಂಡಿರುವ ಯಾವುದೇ ಒಂದು ಪ್ರಾಧಿಕಾರ ಮತ್ತು ಕೇಂದ್ರಸರಕಾರದಿಂದ ಅಥವಾ ಸಂದರ್ಭಾನುಸಾರ, ರಾಜ್ಯಸರಕಾರದಿಂದ ಜಾರಿಯಲ್ಲಿರುವ ಕಾನೂನಿಗೆ ಅನುಗುಣವಾಗಿ ಪ್ರಾಧಿಕಾರ ನೀಡಲಾದ ವ್ಯಕ್ತಿಯಾಗಿದ್ದು ಇದು ಜಿಲ್ಲಾ ದಂಡಾಧೀಶ ಪೊಲೀಸ್ ಕಮಿಶನರ್ ಅಥವಾ ತಾತ್ಕಾಲಿಕವಾಗಿ ಜಾರಿಯಲ್ಲಿರುವ ಕಾನೂನಿಗೆ ಅನುಗುಣವಾಗಿ ವ್ಯಾಪಕ ವಾಯುಮಾಲಿನ್ಯ ಗುಣಮಟ್ಟ ಕಾಯ್ದುಕೊಳ್ಳಲು ಪೊಲೀಸ್ ಸುಪರಿ0ಟೆಂಡೆಂಟ್ ನಿಗಿಂತ ಕೆಳಮಟ್ಟದವನಾಗಿರದೆ ಹೆಸರಿಸಲಾಗಿರುವ ಯಾವನೇ ಒಬ್ಬ ಪೊಲೀಸ್ ಅಧಿಕಾರಿ.

(ಡಿ) **“ನ್ಯಾಯಾಲಯ”** ಎಂದರೆ ವಿವಾದಗಳ ಅಧಿನಿರ್ಣಯ ಮಾಡಲು ಮತ್ತು ನ್ಯಾಯದ ಆಡಳಿತ ನಡೆಸಲು ಪೀಠಾಸೀನರಾಗುವ ಒಬ್ಬ ಅಥವಾ ಹೆಚ್ಚಿನ ನ್ಯಾಯಾಧಿಶರಿಂದ ಕೂಡಿರುವ ಒಂದು ಸರ್ಕಾರಿ ನಿಕಾಯವಾಗಿರುತ್ತದೆ ಮತ್ತು ಇದು ಒಬ್ಬ ನ್ಯಾಯಾಧೀಶ ಅಥವಾ ದಂಡಾಧೀಶನು ಪೀಠಾಸೀನನಾಗಿದ್ದು ದೀವಾನೀ, ಕರಸಂಬಂಧಿ ಮತ್ತು ಅಪರಾಧಿಕ ಪ್ರಕರಣಗಳಲ್ಲಿ ಒಂದು ನ್ಯಾಯಾಧಿಕರಣದ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡುತ್ತಿರುವವನು ಪೀಠಾಸೀನನಾಗಿರುವ ಯಾವುದೇ ಒಂದು ನ್ಯಾಯಾಲಯವನ್ನು ಒಳಗೊಂಡಿರುತ್ತದೆ.

(ಇ) **“ಶಿಕ್ಷಣ ಸಂಸ್ಥೆ”** ಎಂದರೆ ಒಂದು ಶಾಲೆ, ಸೆಮಿನರಿ, ಕಾಲೇಜು, ವಿಶ್ವವಿದ್ಯಾಲಯ ಹಾಗೂ ವೃತ್ತಿಪ್ರಧಾನ ಶಿಕ್ಷಣಸಂಸ್ಥೆಗಳು, ತರಬೇತಿ ಸಂಸ್ಥೆಗಳು ಅಥವಾ ಇತರ ಶೈಕ್ಷಣಿಕ ಸಂಸ್ಥೆಗಳು, ಆದರೆ ಚಾರ್ಟರಡ್ ಇನ್‌ಸ್ಟಿಟ್ಯೂಶನ್ ಆಗಿರಬೇಕಾಗಿಲ್ಲ ಮತ್ತು ಇದು ಕಟ್ಟಡಗಳನ್ನಷ್ಟೇ ಒಳಗೊಂಡಿರದೆ ಶೈಕ್ಷಣಿಕ ಬೋಧನೆಯ ಪೂರ್ಣ ಪರಿಧಿಯನ್ನು ಸಾಧಿಸುವುದಕ್ಕಾಗಿ ಎಲ್ಲ ಆವಶ್ಯಕ ಭೂಭಾಗಗಳನ್ನು ಒಳಗೊಂಡಿರುತ್ತದೆ ಮತ್ತು ಮಾನಸಿಕ, ನೈತಿಕ ಮತ್ತು ದೈಹಿಕ ವಿಕಾಸಕ್ಕೆ ಅವಶ್ಯಕವಾಗಿರುವ ಎಲ್ಲ ಸಂಗತಿಗಳನ್ನು ಒಳಗೊಂಡಿರುತ್ತದೆ.

(ಎಫ್) **“ಆಸ್ಪತ್ರೆ”** ಎಂದರೆ ರೋಗಗ್ರಸ್ತರು, ಗಾಯಗೊಂಡವರು, ಅಶಕ್ತ ಅಥವಾ ವಯಸ್ಸಾದ ವ್ಯಕ್ತಿಗಳನ್ನು ಸೇರಿಸಿಕೊಳ್ಳುವ ಮತ್ತು ಅವರ ಶುಶ್ರೂಷೆ ಮಾಡುವ ಒಂದು ಸಂಸ್ಥೆಯಾಗಿದ್ದು ಅದು ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು ಮತ್ತು ಕ್ಲಿನಿಕ್‌ಗಳನ್ನು ಒಳಗೊಂಡಿರುತ್ತದೆ.

(ಜಿ) **“ವ್ಯಕ್ತಿ”** ಎಂದರೆ ನಿಗಮಿತಗೊಳಿಸಲಾಗಿರುವ ಅಥವಾ ನಿಗಮಿತಗೊಳಿಸಲಾಗಿರದ ಯಾವುದೇ ಒಂದು ಕಂಪೆನಿ ಅಥವಾ ವ್ಯಕ್ತಿಗಳ ಕೂಟ ಅಥವಾ ನಿಕಾಯವಾಗಿರುತ್ತದೆ.

(ಎಚ್) **“ರಾಜ್ಯಸರ್ಕಾರ”** ಎಂದರೆ ಒಂದು ಕೇಂದ್ರ ಪ್ರದೇಶದ ಸಂಬಂಧದಲ್ಲಿ ಸಂವಿಧಾನದ ಅನುಚ್ಛೇದ 239ರ ಅಧೀನ ನೇಮಕಗೊಂಡಿರುವ ಅದರ ಒಬ್ಬ ಆಡಳಿತಾಧಿಕಾರಿಯಾಗಿರುವನು.

(ಐ) **"ಸಾರ್ವಜನಿಕ ಸ್ಥಳ"** ಎಂದರೆ ಅದು ಹಕ್ಕಿನ ರೀತಿಯಲ್ಲಿರಲಿ ಅಥವಾ ಆ ರೀತಿಯಿಲ್ಲದಿರಲಿ, ಸಾರ್ವಜನಿಕರಿಗೆ ಪ್ರವೇಶವಿರುವ ಯಾವುದಾದರೊಂದು ಸ್ಥಳವಾಗಿರುತ್ತದೆ ಮತ್ತು ಅಡಿಟೋರಿಯಂ, ಹೋಟೇಲುಗಳು, ಸಾರ್ವಜನಿಕರು ತಂಗುವ ಕೋಣೆಗಳು, ಸಭಾಕೇಂದ್ರಗಳು, ಸಾರ್ವಜನಿಕ ಕಚೇರಿಗಳು, ವ್ಯಾಪಾರಿ ಮಳಿಗೆಗಳು, ಸಿನೆಮಾ ಹಾಲ್‌ಗಳು, ಶೈಕ್ಷಣಿಕ ಸಂಸ್ಥೆಗಳು, ಪುಸ್ತಕಾಲಯಗಳು, ಮೈದಾನುಗಳು ಮತ್ತು ಸಾರ್ವಜನಿಕರು ಸಂದರ್ಶಿಸುವ ಇಂಥ ಸ್ಥಳಗಳು; ಮತ್ತು

(ಜೆ) **“ರಾತ್ರಿಕಾಲ”** ಎಂದರೆ ಅಪರಾಹ್ನ (ರಾತ್ರಿ) 10 ರಿಂದ ಪೂರ್ವಾಹ್ನ (ಬೆಳಿಗ್ಗೆ) 6 ರ ಒಳಗಿನ ಸಮಯ.

**3. ವಿವಿಧ ಪ್ರದೇಶಗಳು/ ವಲಯಗಳ ಶಬ್ದದ ಸಂಬಂಧದಲ್ಲಿ ವ್ಯಾಪಕ ವಾಯು ಗುಣಮಟ್ಟ ಪ್ರಮಾಣ ಮಾಪಕಗಳು–**

(1) ವಿವಿಧ ಪ್ರದೇಶಗಳು/ ವಲಯಗಳ ಶಬ್ದದ ಸಂಬಂಧದಲ್ಲಿ ವ್ಯಾಪಕ ವಾಯುಗುಣಮಟ್ಟ ಪ್ರಮಾಪಕಗಳು ಈ ನಿಯಮಗಳಿಗೆ ಹಚ್ಚಲಾಗಿರುವ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

(2) ವಿವಿಧ ವಲಯಗಳಿಗಾಗಿ ಶಬ್ದ ಪ್ರಮಾಣಗಳನ್ನು ಕಾರ್ಯಾಚರಣೆಗೆ ತರುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಪ್ರದೇಶಗಳನ್ನು ಔದ್ಯೋಗಿಕ, ವಾಣಿಜ್ಯಿಕ, ವಸತಿ ಅಥವಾ ಶಬ್ದರಹಿತ ಪ್ರದೇಶಗಳು/ ವಲಯಗಳು ಎಂದು ವರ್ಗೀಕರಿಸತಕ್ಕದ್ದು.

(3) ವಾಹನ ಚಲನವಲನಗಳಿಂದ, ಹಾರ್ನ್ ಮಾಡುವುದರಿಂದ, ಸಿಡಿಮದ್ದು ಸ್ಫೋಟಿಸುವುದರಿಂದ ಉಂಟಾಗುವ ಶಬ್ದ, ಧ್ವನಿವರ್ಧಕಗಳನ್ನು ಬಳಸುವುದರಿಂದ ಅಥವಾ ಸಾರ್ವಜನಿಕ ಸಭೆಗಳ ವಿದ್ಯುನ್ಮಾನ ಉಪಕರಣಗಳಿಂದ ಉಂಟಾಗುವ ಶಬ್ದಗಳ

ಸಮೇತ ಸದ್ದು ಕಡಿಮೆಯಾಗುವಂತೆ ಮಾಡಲು ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳತಕ್ಕದ್ದು. ಶಬ್ದದ ಮಟ್ಟವು ಈ ನಿಯಮದ ಅಧೀನ ನಿರ್ದಿಷ್ಟಪಡಿಸಲಾಗಿರುವ ವಾಯುಗುಣಮಟ್ಟ ಪ್ರಮಾಪಕ ಕಡಿಮೆ ಮಾಡುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು.

(4) ವಿಕಾಸ ಕಾರ್ಯಕ್ರಮಗಳ ಯೋಜನೆ ಮಾಡುತ್ತಿದ್ದಾಗ ಅಥವಾ ನಗರ ಯೋಜನೆ ಮತ್ತು ಗ್ರಾಮೀಣ ಯೋಜನೆಯ ಪ್ರಕಾರಗಳನ್ನು ಕಾರ್ಯಾಚರಣೆಗೆ ತರುವಾಗ ಎಲ್ಲ ವಿಕಾಸ ಪ್ರಾಧಿಕಾರಗಳು, ಪ್ರಾದೇಶಿಕ ನಿಕಾಯಗಳು ಮತ್ತು ಸಂಬಂಧಪಟ್ಟ ಇತರ ಪ್ರಾಧಿಕಾರಗಳು ಶಬ್ದದ ಅಪಾಯವನ್ನು ತಪ್ಪಿಸಲು ಮತ್ತು ಶಬ್ದದ ವ್ಯಾಪಕ ಗುಣಮಟ್ಟವನ್ನು ಕಾಯ್ದುಕೊಳ್ಳಲು ಜೀವನದ ಗುಣಮಟ್ಟದ ಒಂದು ಪ್ರಮಾಪನದ ರೀತಿಯಲ್ಲಿ ಶಬ್ದ ಮಾಲಿನ್ಯದ ಎಲ್ಲ ಅಂಶಗಳನ್ನು ಪರಿಶೀಲನೆಗೆ ತೆಗೆದುಕೊಳ್ಳತಕ್ಕದ್ದು.

(5) ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ನ್ಯಾಯಲಯದ ಸುತ್ತಲೂ 100 ಮೀಟರ್‌ಗಳಿಗೆ ಕಡಿಮೆಯಾಗದ ಒಂದು ಪ್ರದೇಶವನ್ನು ಈ ನಿಯಮಗಳ ಉದ್ದೇಶಕ್ಕಾಗಿ ನಿಶ್ಶಬ್ದ ಪ್ರದೇಶ/ವಲಯ ಎಂದು ಘೋಷಿಸಬಹುದು.

**4. ಶಬ್ಧ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸುವ ಹೊಣೆಗಾರಿಕೆ–**

(1) ಯಾವುದೇ ಒಂದು ಪ್ರದೇಶ / ವಲಯದಲ್ಲಿ ಶಬ್ದದ ಮಟ್ಟವು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಶಬ್ದದ ಪ್ರಮಾಣವನ್ನು ಮೀರುವಂತಿಲ್ಲ.

(2) ಶಬ್ದ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸಲು ಮತ್ತು ಶಬ್ದದ ಸಂಬಂಧದಲ್ಲಿ ವಾಯುಗುಣಮಟ್ಟ ಪ್ರಮಾಪಕದ ವ್ಯಾಪಕತೆಯನ್ನು ಯಥಾಕ್ರಮ ಪಾಲಿಸುವಂತೆ ಮಾಡುವುದಿ ಆ ಪ್ರಾಧಿಕಾರದ ಹೊಣೆಗಾರಿಕೆಯಾಗಿರತಕ್ಕದ್ದು.

(3) ಸಂಬಧಪಟ್ಟ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಗಳು/ಮಾಲಿನ್ಯ ನಿಯಂತ್ರಣ ಸಮಿತಿಗಳು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಲಿಯೊಂದಿಗೆ ವಿಚಾರ ವಿನಿಮಯ ನಡೆಸಿ ಶಬ್ದಮಾಲಿನ್ಯ ಮತ್ತು ಅದನ್ನು ಪರಿಣಾಮಕಾರಿಯಾಗಿ ತಡೆಯಲು, ನಿಯಂತ್ರಿಸಲು ಮತ್ತು ಕಡಿಮೆ ಮಾಡಲು ಶಬ್ದಮಾಲಿನ್ಯಕ್ಕೆ ಸಂಬಂಧಪಟ್ಟ ತಾಂತ್ರಿಕ ಮತ್ತು ಅಂಕೆ ಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸತಕ್ಕದ್ದು, ಸಂಕಲನಗೊಳಿಸತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು.

**5. ಧ್ವನಿವರ್ಧಕಗಳು/ ಸಾರ್ವಜನಿಕ ಸಭೆಯ ವಿದ್ಯುನ್ಮಾನ ಉಪಕರಣಗಳು ಮತ್ತು ಶಬ್ಧ ನಿರ್ಮಿಸುವ ಉಪಕರಣಗಳು ಇವುಗಳನ್ನು ಬಳಸುವುದರ ಮೇಲೆ ನಿರ್ಬಂಧನೆಗಳು**

(1) ಒಂದು ಧ್ವನಿವರ್ಧಕ ಅಥವಾ ಒಂದು ಸಾರ್ವಜನಿಕ ಸಭೆಯ ವಿದ್ಯುನ್ಮಾನ ಉಪಕರಣ ಇವುಗಳನ್ನು ಪ್ರಾಧಿಕಾರದಿಂದ ಲಿಖಿತ ಅನುಮತಿ ಪಡೆದ ಹೊರತು ಬಳಸತಕ್ಕುದಲ್ಲ.

(2) ಒಂದು ಧ್ವನಿವರ್ಧಕ ಅಥವಾ ಒಂದು ಸಾರ್ವಜನಿಕ ಸಭೆಯಲ್ಲಿ ಬಳಸುವ ವಿದ್ಯುನ್ಮಾನ ಉಪಕರಣ ಅಥವಾ ಶಬ್ದ ನಿರ್ಮಿಸುವ ಯಾವತ್ತೂ ಉಪಕರಣ ಅಥವಾ ಒಂದು ಸಂಗೀತದ ಉಪಕರಣ ಅಥವಾ ಒಂದು ಶಬ್ದ ಹೆಚ್ಚಿಸುವ ಉಪಕರಣ ಇವುಗಳನ್ನು ಆಡಿಟೋರಿಯಂ, ಸಭಾಭವನಗಳು, ಸಮಾಜಮಂದಿರಗಳು, ಭೋಜನಭವನಗಳು ಅಥವಾ ಒಂದು ಸಾರ್ವಜನಿಕ ತುರ್ತಿನ ಕಾಲದಲ್ಲಿ ಸಂವಹನಕ್ಕಾಗಿ ಆವರಣವನ್ನು ಮುಚ್ಚಿದ ಹೊರತು ರಾತ್ರಿಕಾಲದಲ್ಲಿ ಬಳಸತಕ್ಕುದಲ್ಲ.

(3) ಉಪನಿಯಮ (2)ರೊಳಗೆ ಏನೇ ಇದ್ದರೂ ಸಹ ರಾಜ್ಯ ಸರ್ಕಾರವು ಶಬ್ದ ಮಾಲಿನ್ಯವನ್ನು ಕಡಿಮೆ ಮಾಡುವಂತಹ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ರಾತ್ರಿಕಾಲದಲ್ಲಿ (ಅಪರಾಹ್ನ 10ರಿಂದ ಮಧ್ಯರಾತ್ರಿ 12ರ ತನಕ) ಯಾವತ್ತೂ ಸಾಂಸ್ಕೃತಿಕ ಅಥವಾ ಧಾರ್ಮಿಕ ಹಬ್ಬದಂದು ಅಥವಾ ಆ ಕಾಲದಲ್ಲಿ ಒಂದು ಕ್ಯಾಲೆಂಡರ್ ವರ್ಷದಲ್ಲಿ 15 ದಿನಗಳನ್ನು ಮೀರದ ಒಂದು ಮಿತವಾದ ಕಾಲಾವಧಿಗಾಗಿ ಧ್ವನಿವರ್ಧಕಗಳು ಅಥವಾ ಸಾರ್ವಜನಿಕ ಸಭೆಯ ವಿದ್ಯುನ್ಮಾನ ಉಪಕರಣಗಳನ್ನು ಬಳಸಲು ಅನುಮತಿಸಬಹುದು. ಆ ರಿಯಾಯಿತಿಯು ಎಷ್ಟು ದಿನಗಳಿಗೆ ಅನ್ವಯವಾಗುತ್ತದೆ ಎಂಬುದನ್ನು ಮತ್ತು ಅದರ ವಿವರಗಳನ್ನು ಮುಂಚಿತವಾಗಿ ಸಂಬಂಧಪಟ್ಟ ರಾಜ್ಯಸರ್ಕಾರವು ಸಾಮಾನ್ಯವಾಗಿ ನಿಗದಿಪಡಿಸತಕ್ಕದ್ದು.

(4) ಸಾರ್ವಜನಿಕ ಸ್ಥಳದ ಪರಿಸೀಮೆಯಲ್ಲಿ ಧ್ವನಿವರ್ಧಕ ಅಥವಾ ಸಾರ್ವಜನಿಕ ಸಭೆಯ ವಿದ್ಯುನ್ಮಾನ ಉಪಕರಣ ಅಥವಾ ಇತರ ಯಾವತ್ತೂ ಶಬ್ದದ ಮೂಲವು ಉಪಯೋಗಿಸಲಾಗುತ್ತದೋ 10dB(A) ಇದನ್ನು ಆ ಪ್ರದೇಶದ ವ್ಯಾಪಕತೆ ಶಬ್ದ ಪ್ರಮಾಪನವನ್ನು ಅಥವಾ 75 dB(A) ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೀರತಕ್ಕುದಲ್ಲ.

**5.ಎ. ಹಾರ್ನ್ ಮಾಡುವುದು, ಶಬ್ದಮಾಡುವ ಕಟ್ಟಡ ಸಾಧನಗಳು ಮತ್ತು ಸಿಡಿಮದ್ದುಗಳನ್ನು ಸುಡುವುದರ ಮೇಲೆ ನಿರ್ಬಂಧನೆಗಳು.**

(1) ಒಂದು ಸಾರ್ವಜನಿಕ ಆಪಾತ ಸ್ಥಿತಿಯ ಕಾಲದ ಹೊರತು ನಿಶ್ಶಬ್ದವಲಯಗಳಲ್ಲಿ ಅಥವಾ ವಸತಿ ಪ್ರದೇಶಗಳಲ್ಲಿ ರಾತ್ರಿಕಾಲದಲ್ಲಿ ಯಾವತ್ತೂ ಹಾರ್ನ್ ಬಾರಿಸತಕ್ಕದ್ದಲ್ಲ.

(2) ನಿಶ್ಶಬ್ಧ ವಲಯದಲ್ಲಿ ಅಥವಾ ರಾತ್ರಿಕಾಲದಲ್ಲಿ ಶಬ್ದಮಾಡುವ ಸಿಡಿಮದ್ದನ್ನು ಸುಡತಕ್ಕದಲ್ಲ.

(3) ರಾತ್ರಿಕಾಲದಲ್ಲಿ ವಸತಿ ಪ್ರದೇಶದಲ್ಲಿ ಮತ್ತು ನಿಶ್ಶಬ್ದವಲಯದಲ್ಲಿ ಶಬ್ದ ಮಾಡುವ ಕಟ್ಟಡ ನಿರ್ಮಾಣ ಸಾಧನಗಳನ್ನು ಬಳಸತಕ್ಕುದಲ್ಲ.

**6. ನಿಶ್ಶಬ್ದ ವಲಯ/ಪ್ರದೇಶದಲ್ಲಿ ಯಾವತ್ತೂ ಉಲ್ಲಂಘನೆಯ ಪರಿಣಾಮಗಳು**

ನಿಶ್ಶಬ್ದ ವಲಯ/ಪ್ರದೇಶದಲ್ಲಿ ಯಾವಾತನು ಈ ಕೆಳಗಿನ ಅಪರಾಧವನ್ನು ಎಸಗುವನೋ ಆತನು ಈ ಅಧಿನಿಯಮದ ಉಪಬಂಧನೆಗಳ ಅಧೀನ ಜುಲ್ಮಾನೆಗೆ ಬಾಧ್ಯನಾಗತಕ್ಕದ್ದು.

(i) ಯಾವಾತನು ಯಾವತ್ತೂ ವಾದ್ಯ ಬಾರಿಸುವನೋ ಅಥವಾ ಯಾವತ್ತೂ ಶಬ್ದವರ್ಧಕಗಳನ್ನು ಬಳಸುವನೋ

(ii) ಯಾವಾತನು ಒಂದು ಡೋಲು ಅಥವಾ ಟಾಂ–ಟಾಂ ಬಾರಿಸುವನೋ ಅಥವಾ ಒಂದು ಕೊಂಬು ಊದುವನೋ, ಅದು ಸಂಗೀತಾಧಾರಿತವಾಗಿರಬಹುದು ಅಥವಾ ಒತ್ತಡ ಹೇರುವಂತದ್ದಾಗಿರಬಹುದು, ಅಥವಾ ಕಹಳೆ ಬಾರಿಸುವನೋ ಅಥವಾ ಯಾವುದೇ ಒಂದು ಉಪಕರಣವನ್ನು ಬಡಿಯುತ್ತಿರುವನೋ ಅಥವಾ ಶಬ್ಧ ಮಾಡುತ್ತಿರುವನೋ, ಅಥವಾ

(iii) ಯಾವಾತನು ಜನಜಂಗುಳಿಯನ್ನು ಆಕರ್ಷಿಸುವ ರೀತಿಯಲ್ಲಿ ಯಾವತ್ತೂ ಮೂಕಾಭಿನಯ, ಸಂಗೀತಾಧಾರಿತ ಅಥವಾ ಇತರ ನಟನೆಯನ್ನು ಪ್ರದರ್ಶಿಸುವನೋ,

(iv) ಯಾವಾತನು ಶಬ್ದ ಮಾಡುವ ಸಿಡಿಮದ್ದನ್ನು ಸುಡುವನೋ; ಅಥವಾ

(v) ಯಾವಾತನು ಒಂದು ಧ್ವನಿವರ್ಧಕ ಅಥವಾ ಸಾರ್ವಜನಿಕ ಸಭೆಯ ವಿದ್ಯುನ್ಮಾನ ಉಪಕರಣವನ್ನು ಬಳಸುತ್ತಿರುವನೋ, ಆತನು ಈ ಅಧಿನಿಯಮದ ಉಪಬಂಧಗಳ ಅಧೀನ ದಂಡನೆಗೆ ಬಾಧ್ಯನಾಗತಕ್ಕದ್ದು

**7. ಪ್ರಾಧಿಕಾರಕ್ಕೆ ಫಿರ್ಯಾದಿಗಳನ್ನು ನೀಡತಕ್ಕದ್ದು–**

(1) ಒಂದೊಮ್ಮೆ ಆ ಶಬ್ದವು ವ್ಯಾಪಕ ಶಬ್ದ ಪ್ರಮಾಪನ 10 dB(A) ಮೀರಿದರೆ ಅಥವಾ ತತ್ಸಮಾನವಾದ ಭಾಗದಲ್ಲಿ ನೀಡಲಾಗಿರುವ ಯಾವತ್ತೂ ಪದೇಶ ಅಥವಾ ವಲಯ ಇದಕ್ಕಿಂತ ಹೆಚ್ಚಿನದ್ದಾಗಿದ್ದರೆ ಅಥವಾ, ರಾತ್ರಿಕಾಲಕ್ಕಾಗಿ ಹೇರಲಾಗಿರುವ ನಿರ್ಬಂಧನೆಗಳ ಸಂಬಂಧದಲ್ಲಿ ಈ ನಿಯಮಗಳ ಯಾವತ್ತೂ ಉಪಬಂಧದ ಉಲ್ಲಂಘನೆಯಾದರೆ, ಒಬ್ಬ ವ್ಯಕ್ತಿಯು ಪ್ರಾಧಿಕಾರಕ್ಕೆ ಫಿರ್ಯಾದಿ ಸಲ್ಲಿಸಬಹುದು.

(2) ಪ್ರಾಧಿಕಾರವು ಫಿರ್ಯಾದಿ ಪಡೆದಾಗ ಕಾರ್ಯೋನ್ಮುಖವಾಗತಕ್ಕದ್ದು ಮತ್ತು ಈ ನಿಯಮಗಳು ಮತ್ತು ಜಾರಿಯಲ್ಲಿರುವ ಇತರೆ ಯಾವತ್ತೂ ಕಾನೂನಿನ ಉಪಬಂಧಗಳಿಗೆ ಅನುಗುಣವಾಗಿ ಉಲ್ಲಂಘನೆಗಾರನ ವಿರುದ್ಧ ಕ್ರಮ ತೆಗೆದುಕೊಳ್ಳತಕ್ಕದ್ದು.

**8. ಸಂಗೀತ, ಶಬ್ದ ಅಥವಾ ಸದ್ದು ಮುಂದುವರಿಯದಂತೆ ನಿಷೇಧಿಸುವ ಅಧಿಕಾರ ಇತ್ಯಾದಿ**

(1) ಒಂದು ಪೋಲೀಸ್ ಕಛೇರಿಯ ತಾಬೆ ಹೊಂದಿರುವ ಒಬ್ಬ ಅಧಿಕಾರಿಯ ವರದಿಯಿಂದ ಅಥವಾ ಫಿರ್ಯಾದಿಗಾರನಿಂದ ಪಡೆದಿರುವ ಮಾಹಿತಿ ಸಮೇತ ಇತರ ಮಾಹಿತಿಯಿಂದ ಆ ಉಪದ್ರವ, ತೊಂದರೆ, ಅನಾನುಕೂಲತೆ ಅಥವಾ ಕಾಟ ಅಥವಾ ಉಪದ್ರವದ್ರ ತೊಂದರೆಯ, ಅನಾನುಕೂಲತೆಯ ಅಥವಾ ಕಾಟದಿಂದ ಸಾರ್ವಜನಿಕರಿಗೆ ಅಥವಾ ಸಮೀಪ ವಾಸಿಸುತಿದ್ದವರಿಗೆ ಅಥವಾ ಆಸ್ತಿ ಹೊಂದಿರುವ ಯಾವನೇ ಒಬ್ಬ ವ್ಯಕ್ತಿಗೆ ಆ ರೀತಿಯಾಗಲಿದೆ ಎಂದು ಒಂದೊಮ್ಮೆ ಪ್ರಾಧಿಕಾರಕ್ಕೆ ಸಮಾಧಾನವಾದರೆ ಅದನ್ನು ತಡೆಯಲು, ನಿಷೇಧಿಸಲು, ನಿಯಂತ್ರಿಸಲು ಅಥವಾ ಕ್ರಮಬದ್ಧಗೊಳಿಸಲು ತನಗೆ ಅವಶ್ಯಕವೆಂದು ತೋರಬಹುದಾದಂತಹ ನಿರ್ದೇಶಗಳೊಂದಿಗೆ ಯಾವನೇ ಒಬ್ಬ ವ್ಯಕ್ತಿಗೆ ಲಿಖಿತ ಆದೇಶದ ಮೂಲಕ ನಿರ್ದೇಶಗಳವನ್ನು ನೀಡಬಹುದು.

ಎ. ಯಾವತ್ತೂ ಅವರಣದಲ್ಲಿ ಅಥವಾ ಆವರಣದ ಮೇಲೆ ಈ ಕೆಳಗಿನ ಸಂಗತಿಗಳು ನಡೆದರೆ, ಮುಂದುವರೆದರೆ ಅಥವಾ

(i) ಯಾವತ್ತೂ ಮೌಖಿಕ ಅಥವಾ ಉಪಕರಣಾಧಾರಿತ ಸಂಗೀತ

(ii) ಧ್ವನಿವರ್ಧಕಗಳು, ಸಾರ್ವಜನಿಕ ಸಭೆಯ ವಿದ್ಯುನ್ಮಾನ ಉಪಕರಣಗಳು, ಕೊಂಬು, ಕಟ್ಟಡ ಕಟ್ಟುವ ಉಪಕರಣ, ಸಾಮಗ್ರಿ ಅಥವಾ ವಸ್ತು ಅಥವಾ ಶಬ್ದವನ್ನು ನಿರ್ಮಿಸಲು ಅಥವಾ ಮರುನಿರ್ಮಿಸಲು ಸಮರ್ಥವಾಗಿರುವ ಯಂತ್ರ ಅಥವಾ

(iii) ಸಿಡಿಮದ್ದು ಸುಡುವುದರಿಂದ ಉಂಟಾಗುವ ಯಾವತ್ತೂ ಶಬ್ದ, ಇಜರಿಂದ

ಬಿ. ಶಬ್ದದಲ್ಲಿ ಪರಿಣಮಿಸುವ ಅಥವಾ ಶಬ್ದದಿಂದ ಕೂಡಿರುವ ಯಾವತ್ತೂ ವ್ಯಾಪಾರ, ವೃತ್ತಿ ಅಥವಾ ಕಾರ್ಯಾಚರಣೆ ಅಥವಾ ಪ್ರಕ್ರಿಯೆಯನ್ನು ಯಾವತ್ತೂ ಆವರಣದ ಒಳಗೆ ಅಥವಾ ಆವರಣದ ಮೇಲೆ ನಡೆಸುವುದು.

(2) ಉಪನಿಯಮ (1) ಇದರ ಅಧೀನ ಅಧಿಕಾರ ಪಡೆದಿರುವ ಪ್ರಾಧಿಕಾರವು ತೊಂದರೆಪಟ್ಟಿರುವ ಯಾವನೇ ಒಬ್ಬ ವ್ಯಕ್ತಿಯು ಅರ್ಜಿ ಮಾಡಿದಾಗ ಆ ಪ್ರಾಧಿಕಾರವು ಅಂತಹ ಆದೇಶವನ್ನು ರದ್ದುಗೊಳಿಸಬಹುದು, ಮಾರ್ಪಾಡುಗೊಳಿಸಬಹುದು ಅಥವಾ ಬದಲಾಯಿಸಬಹುದು: ಪರಂತು ಅದೇನೆಂದರೆ ಅಂತಹ ಯಾವತ್ತೂ ಅರ್ಜಿಯು ವಿಲೇಯಾಗುವುದಕ್ಕಿಂತ ಮೊದಲು ಮೇಲೆ ಉಲ್ಲೇಖಿಸಲಾದ ಪ್ರಾಧಿಕಾರವು ಅರ್ಜಿದಾರನಿಗೆ, ಖುದ್ದಾಗಿ ಅಥವಾ ಅವರನ್ನು ಪ್ರತಿನಿಧಿಸುತ್ತಿರುವ ಒಬ್ಬ ವ್ಯಕ್ತಿಯ ಮೂಲಕ ಅದರ ಮುಂದೆ ಹಾಜರಾಗಿ ಆ ಆದೇಶದ ವಿರುದ್ಧ ಕಾರಣ ತೋರಿಸಲು ಒಂದು ಅವಕಾಶ ನೀಡತಕ್ಕದ್ದು ಮತ್ತು ಒಂದೊಮ್ಮೆ ಅದು ಅಂತಹ ಅರ್ಜಿಯನ್ನು ಪೂರ್ಣವಾಗಿ ಅಥವಾ ಭಾಗಶಃ ತಿರಸ್ಕರಿಸಿದರೆ, ಆ ರೀತಿ ತಿರಸ್ಕಾರ ಮಾಡಿರುವುದಕ್ಕೆ ಕಾರಣವನ್ನು ದಾಖಲುಗೊಳಿಸತಕ್ಕದ್ದು.

**ಅನುಸೂಚಿ**

**ನಿಯಮ 3(1) ಮತ್ತು 4(1) ನೋಡಿ**

| ಪ್ರದೇಶದ ಸಂಕೇತ | ಪ್ರದೇಶ/ವಲಯದ ಪ್ರವರ್ಗ | ಮಿತಿ ಡಿಬಿ(ಎ)ಗಳಲ್ಲಿ | |
|---|---|---|---|
| | | ದಿನದ ಅವಧಿ | ರಾತ್ರಿ ಅವಧಿ |
| ಎ | ಕೈಗಾರಿಕಾ ಪ್ರದೇಶ | 75 | 70 |
| ಬಿ | ವಾಣಿಜ್ಯ ಪ್ರದೇಶ | 65 | 55 |
| ಸಿ | ವಸತಿ ಪ್ರದೇಶ | 55 | 45 |
| ಡಿ | ಮೌನ ವಲಯ | 50 | 40 |

ಟಿಪ್ಪಣಿ: 1. ದಿನದ ಅವಧಿ ಅಂದರೆ ಬೆಳಿಗ್ಗೆ 6.00ರಿಂದ ರಾತ್ರಿ 10.00ಗಂಟೆಯವರೆಗೆ

2. ರಾತ್ರಿ ಅವಧಿ ಅಂದರೆ ರಾತ್ರಿ 10.00ರಿಂದ ಬೆಳಿಗ್ಗೆ 6.00ಗಂಟೆಯವರೆಗೆ

3. ಮೌನ ವಲಯ ಅಂದರೆ ಆಸ್ಪತ್ರೆಗಳು, ಶೈಕ್ಷಣಿಕ ಸಂಸ್ಥೆಗಳು, ನ್ಯಾಯಾಲಯಗಳು, ಧಾರ್ಮಿಕ ಸ್ಥಳಗಳಿಂದ ಸುಮಾರು 100 ಮೀಟರ್‌ಗಿಂತ ಕಡಿಮೆಯಲ್ಲದ ಪ್ರದೇಶಗಳು ಅಥವಾ ಸಕ್ಷಮ ಅಧಿಕಾರದಿಂದ ಘೋಷಿಸಲ್ಪಟ್ಟ ಪ್ರದೇಶವನ್ನು ಒಳಗೊಂಡಿವೆ.
4. ಮೇಲೆ ತಿಳಿಸಿದ ಪ್ರವರ್ಗಗಳಲ್ಲಿ ಯಾವುದಾದರೊಂದು ಪ್ರದೇಶವನ್ನು ಮಿಶ್ರ ಪ್ರವರ್ಗ ಎಂದು ಸಕ್ಷಮ ಅಧಿಕಾರಿಗಳು ಘೋಷಿಸಬಹುದು.

*dB(A)ಲೆಕ್ ಎಂಬುದು ಶಬ್ದ ಮಟ್ಟದ ಸರಾಸರಿ ಅವಧಿಯನ್ನು ಡೆಸಿಬೆಲ್‌ನಲ್ಲಿ ಸೂಚಿಸುತ್ತದೆ. ಶ್ರೇಣಿ ಎ ಇದು ಮಾನವನ ಕೇಳುವಿಕೆ ಸಂಬಂಧವಾಗಿದೆ.

A "ಡೆಸಿಬೆಲ್" ಇದು ಶಬ್ದವನ್ನು ಅಳೆಯುವ ಘಟಕವಾಗಿದೆ.
"ಎ" ಡಿಬಿ(ಎ)ನಲ್ಲಿ ಲೇಕ್ ಸೂಚಿಸುತ್ತದೆ
ಲೆಕ್: ಇದು ಒಂದು ನಿರ್ದಿಷ್ಟ ಅವಧಿಯಲ್ಲಿ ಶಬ್ದದ ಮಟ್ಟವನ್ನು ಸೇರುವ ಶಕ್ತಿ.

ಸೂಚನೆ: ಈ ಪ್ರಧಾನ ನಿಯಮಗಳನ್ನು ಭಾರತದ ರಾಜ್ಯಪತದ ಸಂಖ್ಯೆ ಎಸ್.ಒ.123(ಇ) ದಿನಾಂಕ 14ನೇ ಫೆಬ್ರುವರಿ 2000ರಲ್ಲಿ ಪ್ರಧಾನ ನಿಯಮಗಳನ್ನು ಪ್ರಕಟಿಸಲಾಗಿದೆ ಮತ್ತು ಸಂಖ್ಯೆ ಎಸ್.ಒ.1046(ಇ) ದಿನಾಂಕ 22ನೇ ನವೆಂಬರ 2000, ಎಸ್.ಒ.1088(ಇ) ದಿನಾಂಕ 11ನೇ ಅಕ್ಟೋಬರ್ 2002, ಎಸ್.ಒ.1569(ಇ) ದಿನಾಂಕ 19ನೇ ಸೆಪ್ಟೆಂಬರ್, 2006 ಮತ್ತು ಸಂಖ್ಯೆ ಎಸ್.ಒ.50(ಇ) ದಿನಾಂಕ 11ನೇ ಜನವರಿ 2010ರಲ್ಲಿ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ.